ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.-12/2023 ದಿನಾಂಕ: 26-06-2023

## ಪ್ರಕಟಣೆ – ಶಾಲೆ / ಕಾಲೇಜುಗಳ ವಿವರಗಳ ತಿದ್ದುಪಡಿ ಅವಕಾಶ

ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ, ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ, 12ನೇ ತರಗತಿಯ ಅಂಕಗಳ ಪರಿಶೀಲನೆಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ "ಎ" ಅರ್ಹತಾ ಕಂಡಿಕೆಯನ್ನು (eligibility clause code "a") ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ಪರಿಶೀಲನೆಗೆ ಹಾಜರಾಗಲು ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಯುಜಿಸಿಇಟಿ-2023 ರ ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಗಳು ದಾಖಲಿಸಿರುವ ಶಾಲೆ / ಕಾಲೇಜುಗಳಲ್ಲಿನ ವ್ಯಾಸಂಗ, ಅವಧಿ, ತೇರ್ಗಡೆ ವರ್ಷ, ಇತ್ಯಾದಿ ವಿವರವನ್ನು ಆಧರಿಸಿ ಬಿಇಓ ರವರು ಪರಿಶೀಲನೆ ಮಾಡುತ್ತಾರೆ. **ಒಂದುವೇಳೆ ಅಭ್ಯರ್ಥಿಗಳು ನಮೂದಿಸಿರುವ ಶಾಲೆ / ಕಾಲೇಜುಗಳಲ್ಲಿನ ವ್ಯಾಸಂಗ, ಅವಧಿ, ತೇರ್ಗಡೆ ವರ್ಷ ಹಾಗು ಅರ್ಹತಾ ಕಂಡಿಕೆ ವಿವರಗಳಿಗೆ ತಿದ್ದುಪಡಿ ಅವಶ್ಯವಿದ್ದಲ್ಲಿ** ಅಭ್ಯರ್ಥಿಗಳು ಪ್ರಾಧಿಕಾರದ ಪೋರ್ಟಲ್ ನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ ಅಭ್ಯರ್ಥಿಯ USER ID ಮತ್ತು PASSWORD ಅನ್ನು ದಾಖಲಿಸಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಇತರೆ ಯಾವುದೇ ಮಾಹಿತಿಯನ್ನು ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ.

ಗಮನಿಸಿ:

1. ಬಿಇಓ ಕಚೇರಿಯಲ್ಲಿ ಪರಿಶೀಲನೆ ಮಾಡುವ ಮೊದಲು ಶಾಲೆ / ಕಾಲೇಜುಗಳ ವಿವರಗಳ ತಿದ್ದುಪಡಿಯನ್ನು ಮಾಡಿಕೊಳ್ಳತಕ್ಕದ್ದು. ಬಿಇಓ ಕಚೇರಿಯ ಪರಿಶೀಲನೆ ನಂತರ ಶಾಲೆ / ಕಾಲೇಜುಗಳ ತಿದ್ದುಪಡಿಗೆ ಅವಕಾಶ ಇರುವುದಿಲ್ಲ.
2. ಅರ್ಹತಾ ಕಂಡಿಕೆ 'ಎ' ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಇತರ ಅರ್ಹತಾ ಕಂಡಿಕೆಯನ್ನು ಕ್ಲೇಮ್ ಮಾಡಿದ್ದಲ್ಲಿ, 'ಎ' ಅರ್ಹತಾ ಕಂಡಿಕೆಯನ್ನು ಮಾತ್ರ ಕ್ಲೇಮ್ ಮಾಡಬಹುದು.

ತಿದ್ದುಪಡಿ ಮಾಡಿಕೊಳ್ಳಲು – ದಿನಾಂಕ 27-06-2023 ರಿಂದ 15-07-2023 ವರೆಗೆ.

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in